# ದಿನಾಂಕ 19-01-2010 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಹೊಸನಗರ ತಾಲ್ಲೂಕು ನಿಟ್ಟೂರು ಸಿಂಹ ಫಾರಂನಲ್ಲಿ ನಡೆದ ಕಂದಾಯಾಧಿಕಾರಿಗಳ ಸಭೆಯ ನಡವಳಿಕೆಗಳು

ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳನ್ನು ಮಾನ್ಯ ಜಿಲ್ಲಾಧಿಕಾರಿಗಳು ಸ್ವಾಗತಿಸಿ ಸಭೆ ಪ್ರಾರಂಭಿಸಿದರು.

1. **ಸರ್ಕಾರಿ ಬಾಕಿ ವಸೂಲಾತಿ ಬಗ್ಗೆ :-**

ಸರ್ಕಾರಿ ಬಾಕಿ ವಸೂಲಾತಿಗೆ ಸಂಬಂಧಿಸಿದ ತ:ಖ್ತೆ ಪರಿಶೀಲಿಸಲಾಯಿತು. ಡಿಸೆಂಬರ್ 2009ರ ತಿಂಗಳಿಗೆ ನಿಗದಿಪಡಿಸಿದ ಗುರಿಯನ್ನು ಯಾವ ತಹಶೀಲ್ದಾರ್‌ರೂ ಮಾಡಿರುವುದಿಲ್ಲ. ವಸೂಲಾತಿ ಪ್ರಗತಿ ತೀರಾ ಕುಂಠಿತವಾಗಿರುವುದನ್ನು ಗಂಭೀರವಾಗಿ ಪರಿಗಣಿಸಲಾಯಿತು.

ತಹಶೀಲ್ದಾರರು ಸಂಬಂಧಿಸಿದ ಗ್ರಾಮ ಲೆಕ್ಕಗರಿಂದ ಕುಳುವಾರು ಬಾಕಿ ಪಟ್ಟಿ ತಯಾರು ಮಾಡಿಸಿ, ತಂಡಗಳನ್ನು ರಚಿಸಿ ನೋಟೀಸು ನೀಡಿ ವಸೂಲಾತಿಗೆ ಹೋಗಿ ಸರ್ಕಾರಿ ಬಾಕಿ ವಸೂಲಾತಿಯಲ್ಲಿ ಪ್ರಗತಿ ಸಾಧಿಸಲು ತಿಳಿಸಲಾಯಿತು.

ಉಪತಹಶೀಲ್ದಾರರು, ರಾಜಸ್ವ ನಿರೀಕ್ಷಕರು, ಗ್ರಾಮ ಲೆಕ್ಕಿಗರು ಸಹ ವಸೂಲಾತಿ ಬಗ್ಗೆ ಗಮನಹರಿಸದೇ ಇರುವುದು ತಿಳಿದು ಬಂದಿದ್ದು, ಈ ಬಗ್ಗೆ ಗುರಿಯನ್ನು ನಿಗದಿಪಡಿಸಿ ಕಡ್ಡಾಯವಾಗಿ ಆ ಗುರಿಯಂತೆ ವಸೂಲಾತಿ ಮಾಡಲು ಕ್ರಮ ಕೈಗೊಳ್ಳಲು ಎಲ್ಲಾ ಉಪವಿಭಾಗಾಧಿಕಾರಿಗಳಿಗೆ ಹಾಗೂ ತಹಶೀಲ್ದಾರರಿಗೆ ತಿಳಿಸಲಾಯಿತು ಹಾಗೂ ಕಡಿಮೆ ವಸೂಲಾತಿ ಮಾಡುವ ಗ್ರಾಮ ಲೆಕ್ಕಿಗರ ಹಾಗೂ ರಾಜಸ್ವ ನಿರೀಕ್ಷಕರ ವಿವರವನ್ನು ಜಿಲ್ಲಾಧಿಕಾರಿಗಳವರ ಕಛೇರಿಗೆ ಸಲ್ಲಿಸಲು ತಿಳಿಸಲಾಯಿತು.

ಇತರೇ ಬಾಕಿ/ಸಾಲಗಳ ಬಾಕಿ ಬಹಳಷ್ಟು ಇದ್ದು ಈ ಬಗ್ಗೆ ರಾಜಸ್ವ ನಿರೀಕ್ಷಕರು, ತಹಶೀಲ್ದಾರ್‌ರು ವೈಯಕ್ತಿಕ ಗಮನಹರಿಸಿ ವಸೂಲಾತಿ ಮಾಡಲು ತಿಳಿಸಲಾಯಿತು.

ಜನವರಿ 2010ರ ತಿಂಗಳಿಗೆ ಈ ಕೆಳಗಿನಂತೆ ಗುರಿಯನ್ನು ನಿಗದಿಪಡಿಸಿ ಆ ಗುರಿಯಂತೆ ತಪ್ಪದೇ ಸರ್ಕಾರಿ ಬಾಕಿ ವಸೂಲಾತಿ ಮಾಡಲೇಬೇಕೆಂದು ತಹಶೀಲ್ದಾರ್‌ರಿಗೆ ಸೂಚಿಸಲಾಯಿತು.

| ಕ್ರ.ಸಂ. | ತಾಲ್ಲೂಕಿನ ಹೆಸರು | ನಿಗದಿಪಡಿಸಿದ ಗುರಿ ಲಕ್ಷಗಳಲ್ಲಿ |
|---|---|---|
| 1. | ಶಿವಮೊಗ್ಗ | 20.00 |
| 2. | ಭದ್ರಾವತಿ | 15.00 |
| 3. | ತೀರ್ಥಹಳ್ಳಿ | 02.00 |
| 4. | ಹೊಸನಗರ | 05.00 |
| 5. | ಸಾಗರ | 08.00 |
| 6. | ಶಿಕಾರಿಪುರ | 05.00 |
| 7. | ಸೊರಬ | 10.00 |

**2. ಬಗರ್‌ಹುಕುಂ ಅರ್ಜಿಗಳ ವಿಲೇವಾರಿ ವಿಚಾರ :-**

ಬಗರ್ ಹುಕ್ಕುಂ ಜಮೀನಿನ ಸಕ್ರಮೀಕರಣಕ್ಕಾಗಿ ನಮೂನೆ 50 ಮತ್ತು 53ರಲ್ಲಿ ಸಲ್ಲಿಸಿರುವ ಅರ್ಜಿಗಳ ವಿಲೇವಾರಿ ಕುರಿತ ತ:ಖ್ತೆ ಪರಿಶೀಲಿಸಲಾಯಿತು.

ಭದ್ರಾವತಿ ಮತ್ತು ಶಿಕಾರಿಪುರ ತಾಲ್ಲೂಕಿನಲ್ಲಿ ಮಾತ್ರ ಬಗರ್ ಹುಕ್ಕುಂ ಸಮಿತಿ ಸಭೆ ರಚನೆ ಆಗಿರುವುದಾಗಿ ಉಳಿದ ತಾಲ್ಲೂಕುಗಳಲ್ಲಿ ಸರ್ಕಾರದಿಂದ ರಚನೆ ಆಗಬೇಕಾಗಿರುವುದಾಗಿ ತಹಶೀಲ್ದಾರ್‌ರು ತಿಳಿಸಿದರು.

ನಮೂನೆ 50ರ ಹಾಗೂ ನಮೂನೆ 53ರ ಅರ್ಜಿಗಳು ಇನ್ನು ಬಹಳಷ್ಟು ಬಾಕಿ ಇದ್ದು ಅವುಗಳ ಬಗ್ಗೆ ಸ್ಥಳ ಪರಿಶೀಲನೆ ನೆಡೆಸಿ ನಿಯಮಗಳ ರೀತ್ಯಾ ಕಡತ ತಯಾರಿಸಿಟ್ಟುಕೊಳ್ಳಲು ಎಲ್ಲಾ ತಹಶೀಲ್ದಾರ್‌ರಿಗೆ ಸೂಚಿಸಲಾಯಿತು.

ನಮೂನೆ 50 ಮತ್ತು 53ರ ಬಗ್ಗೆ ಕಡತ ತಯಾರಿಸುವ ಬಗ್ಗೆ ಬಾಕಿ ಇರುವ ಅರ್ಜಿಗಳ ವಿವರ ಕೆಳಗಿನಂತಿದೆ.

| ಕ್ರ. ಸಂ. | ತಾಲ್ಲೂಕು | ಕಡತ ತಯಾರಿಸಲು ಬಾಕಿ ಇರುವ ಅರ್ಜಿಗಳು | |
|---|---|---|---|
| | | ನಮೂನೆ 50 | ನಮೂನೆ 53 |
| 1. | ಶಿವಮೊಗ್ಗ | – | 1193 |
| 2. | ಭದ್ರಾವತಿ | – | 796 |
| 3. | ತೀರ್ಥಹಳ್ಳಿ | – | 5072 |
| 4. | ಹೊಸನಗರ | 259 | 3042 |
| 5. | ಸಾಗರ | – | 1682 |
| 6. | ಸೊರಬ | 200 | 3360 |
| 7. | ಶಿಕಾರಿಪುರ | 198 | 2492 |

ಮೇಲ್ಕಂಡ ಬಾಕಿ ಅರ್ಜಿಗಳ ಬಗ್ಗೆ ಈ ತಿಂಗಳಲ್ಲಿ ಅರ್ಧ ಭಾಗದ ಅರ್ಜಿಗಳ ಬಗ್ಗೆ ಕಡತ ತಯಾರಿಸಿ ಸಮಿತಿ ಮುಂದೆ ಮಂಡಿಸಲು ಸಿದ್ದವಾಗಿಟ್ಟುಕೊಳ್ಳುವುದು. ಸಮಿತಿ ರಚನೆ ಆಗಿರುವ ತಾಲ್ಲೂಕಿನಲ್ಲಿ ಸಮಿತಿಗೆ ತಯಾರಾದ ಕಡತಗಳನ್ನು ಇಟ್ಟು ನಿಯಮ ರೀತ್ಯಾ ವಿಲೇವಾರಿ ಮಾಡಲು ತಿಳಿಸಲಾಯಿತು ಹಾಗೂ ಬಾಕಿ ಅರ್ಜಿಗಳ ಬಗ್ಗೆ ಡ್ರೈವ್ ರೀತಿ ವಿಲೇವಾರಿಗೆ ಕ್ರಮ ಕೈಗೊಳ್ಳಲು ತಿಳಿಸಲಾಯಿತು.

ಸಮಿತಿ ರಚನೆ ಆಗಿರುವ ತಾಲ್ಲೂಕುಗಳಲ್ಲಿ ಪ್ರತಿ ತಿಂಗಳು 2 ರಿಂದ 3 ಸಮಿತಿ ಸಭೆ ಕರೆದು ಅರ್ಜಿಗಳ ವಿಲೇವಾರಿಗೆ ಕ್ರಮ ವಹಿಸಲು ತಿಳಿಸಲಾಯಿತು.

**3. 1978ರ ಪೂರ್ವದಲ್ಲಿ ಅರಣ್ಯ ಜಮೀನಿನಲ್ಲಿ ಒತ್ತುವರಿ ಮಾಡಿದ ಪ್ರಕರಣಗಳ ವಿಲೇವಾರಿ :-**

ಈ ವಿಚಾರಕ್ಕೆ ಸಂಬಂಧಿಸಿದ ಪ್ರಗತಿ ತ:ಖ್ತೆ ಪರಿಶೀಲಿಸಲಾಯಿತು. ತಹಶೀಲ್ದಾರ್, ಶಿವಮೊಗ್ಗ ಇವರಲ್ಲಿ 141 ಪ್ರಕರಣಗಳು, ತೀರ್ಥಹಳ್ಳಿ ಇವರಲ್ಲಿ 27 ಪ್ರಕರಣಗಳಿಗೆ ಹೊಸನಗರ ತಾಲ್ಲೂಕಿನಲ್ಲಿ 2 ಪ್ರಕರಣಗಳಿಗೆ ಕಡತ ತಯಾರಿಸಲಾಗುವುದು ಬಾಕಿ ಇರುವುದಾಗಿ ತಿಳಿಸಿದರು. ಈ ಬಗ್ಗೆ ತಹಶೀಲ್ದಾರ್‌ರು ಅರಣ್ಯ ಇಲಾಖೆಯವರು 27–4–1978ರ ಪೂರ್ವದಲ್ಲಿ ಬಗರ್

ಹುಕ್ಕುಂ ಮಾಡಿರುವ ಪ್ರಕರಣದ ಬಗ್ಗೆ ತಯಾರಿಸಿರುವ ಪಟ್ಟಿ ರೀತ್ಯಾ ಅರಣ್ಯ ಇಲಾಖೆಯೊಂದಿಗೆ ಜಂಟಿ ಸ್ಥಳ ತನಿಖೆ ನೆಡೆಸಿ ಸ್ಕೆಚ್ ಹಾಗೂ ಕಡತದೊಂದಿಗೆ ಅರ್ಹತೆ ಬಗ್ಗೆ ಚೆಕ್‌ಲಿಸ್ಟ್‌ನೊಂದಿಗೆ ವರದಿ ಮಾಡಲು ಸೂಚಿಸಲಾಯಿತು.

4. **94 "ಸಿ" ಅರ್ಜಿಗಳ ವಿಲೇವಾರಿ ಕುರಿತು** :-

ಪ್ರಗತಿ ತ;ಖ್ತೆ ಪರಿಶೀಲಿಸಲಾಯಿತು. ಭದ್ರಾವತಿ 327, ತೀರ್ಥಹಳ್ಳಿ, 528, ಸಾಗರ 13 ಪ್ರಕರಣಗಳಿಗೆ ಹಕ್ಕುಪತ್ರ ನೀಡಲು ಬಾಕಿ ಇದ್ದು ಯಾವ ಕಾರಣದಿಂದಾಗಿ ಎಷ್ಟೆಷ್ಟು ಪ್ರಕರಣಗಳಿಗೆ ಹಕ್ಕುಪತ್ರಗಳನ್ನು ನೀಡಲು ಸಾಧ್ಯವಾಗುತ್ತಿಲ್ಲವೆಂಬ ಬಗ್ಗೆ ಮುಂದಿನ ಸಭೆಯಲ್ಲಿ ವಿವರಣೆ ಹಾಗೂ ಪಟ್ಟಿಯೊಂದಿಗೆ ಹಾಜರಾಗಲು ಹಾಗೂ 15 ದಿವಸ ಮುಂಚಿತವಾಗಿ ಈ ಕಛೇರಿಗೆ ವರದಿ ಸಲ್ಲಿಸಲು ಸೂಚಿಸಲಾಯಿತು.

5. **ಪಿ.ಟಿ.ಸಿ.ಎಲ್. ಪ್ರಕರಣಗಳ ವಿಲೇವಾರಿ ಕುರಿತು** :-

ಪ್ರಗತಿ ತ:ಖ್ತೆ ಪರಿಶೀಲಿಸಲಾಯಿತು. ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ಸಾಕಷ್ಟು ಪ್ರಕರಣಗಳು ಬಾಕಿ ಇದ್ದು, ಅವುಗಳ ವಿಲೇವಾರಿ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

6. **ಮ್ಯುಟೇಶನ್ ಪ್ರಕರಣಗಳ ವಿಲೇವಾರಿ ಕುರಿತು** :-

ಪ್ರಗತಿ ತ:ಖ್ತೆ ಪರಿಶೀಲಿಸಲಾಯಿತು. ಬಹಳಷ್ಟು ಮ್ಯುಟೇಷನ್ ಪ್ರಕರಣಗಳು ಬಾಕಿ ಇದ್ದು, ವಿವಿಧ ಹಂತಗಳಲ್ಲಿ ಬಾಕಿ ಇದ್ದು, 45 ದಿವಸಕ್ಕೂ ಅವಧಿ ಮೀರಿರುವ ಪ್ರಕರಣಗಳ ವಿಲೇವಾರಿ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

7. **ಪಹಣಿ ದಾಖಲೆಯಲ್ಲಿ ಅರಣ್ಯ ಜಮೀನು ಇಂಡೀಕರಿಸುವ ಬಗ್ಗೆ** :-

ಪ್ರಗತಿ ತ:ಖ್ತೆ ಪರಿಶೀಲಿಸಲಾಯಿತು. ಅರಣ್ಯ ಇಲಾಖೆಗೆ ಪಹಣಿಯಲ್ಲಿ ಇಂಡೀಕರಣ ಮಾಡುವ ಬಾಕಿ ಇರುವ ವಿಸ್ತೀರ್ಣವು ತ:ಖ್ತೆಯಿಂದ ತಿಳಿದು ಬರುತ್ತದೆ. ಈ ಬಗ್ಗೆ ತಹಶೀಲ್ದಾರ್‌ರವರು ಅರಣ್ಯ ಇಲಾಖೆಯವರಿಂದ ನೋಟಿಫಿಕೇಶನ್ ಪ್ರತಿ, ಮೊಜಾಯಿಕ್ ಮ್ಯಾಪ್ ಇತರೆ ದಾಖಲೆಗಳನ್ನು ಪರಿಶೀಲಿಸಿ ನಿಯಮಾನುಸಾರ ಇಂಡೀಕರಣಗೊಳಿಸಲು ಸೂಚಿಸಲಾಯಿತು.

8. **ಬಾಕಿ ಇರುವ ಶಿಸ್ತು ಪ್ರಕರಣಗಳ ವಿಲೇವಾರಿ** :-

ವಿವಿಧ ಅಧಿಕಾರಿಗಳಲ್ಲಿ ಬಾಕಿ ಇರುವ ಶಿಸ್ತು ಪ್ರಕರಣಗಳ ವಿಲೇವಾರಿ ಪರಿಶೀಲಿಸಲಾಯಿತು. 2006–07, 2008–09ನೇ ಸಾಲಿನ ಶಿಸ್ತು ಪ್ರಕರಣಗಳು ಬಹಳ ಹಳೆಯ ಪ್ರಕರಣಗಳಾಗಿದ್ದು, ವಿಲೇವಾರಿ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

9. **ಭೂಸ್ವಾಧೀನ ಪ್ರಕರಣಗಳ ವಿಲೇವಾರಿ ಬಗ್ಗೆ** :-

ಪ್ರಗತಿ ತ:ಖ್ತೆ ಪರಿಶೀಲಿಸಲಾಯಿತು. ಪ್ರಾಥಮಿಕ ಹಂತದಲ್ಲಿ ಇರುವ ಪ್ರಕರಣಗಳನ್ನು ವಿಲೇವಾರಿ ಮಾಡಲು ಹಾಗೂ ಕಲಂ 4(1)ರ ಹಾಗೂ 6(1)ರ ಪ್ರಕರಣಗಳ ಬಗ್ಗೆ ಗಮನಹರಿಸಿ ಶೀಘ್ರ ವಿಲೇವಾರಿ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. 2 ವರ್ಷಗಳ ಮೇಲ್ಪಟ್ಟ ಬಾಕಿ ಪ್ರಕರಣಗಳ ವಿಲೇವಾರಿ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಭೂಸ್ವಾಧೀನಗೊಂಡ ಪ್ರಕರಣಗಳೀಗೆ ಪರಿಹಾರ ನೀಡುವುದು, ಬಾಕಿ ಇರುವುದು ಕಂಡು

ಬಂದಿದ್ದು, ಈ ಬಗ್ಗೆ ಭೂಸ್ವಾಧೀನಾಧಿಕಾರಿಗಳು ಪರಿಹಾರ ಪಾವತಿ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸಲಾಯಿತು.

**10. <u>ಭೂ ಸುಧಾರಣಾ ಕಾಯ್ದೆಯಡಿ ಸ್ವೀಕೃತವಾದ ನಮೂನೆ 7 ಮತ್ತು 7ಎ ಅರ್ಜಿಗಳ ವಿಲೇವಾರಿ ಕುರಿತು</u> :-**

ಈ ವಿಚಾರಕ್ಕೆ ಸಂಬಂಧಿಸಿದಂತೆ ಪ್ರಗತಿ ತ:ಖ್ತೆ ಪರಿಶೀಲಿಸಲಾಯಿತು. ನಮೂನೆ 7 ಮತ್ತು 7ಎ ಅರ್ಜಿಗಳ ಬಾಕಿ ವಿವರವನ್ನು ಪರಿಶೀಲಿಸಲಾಯಿತು. ಹೋದ ತಿಂಗಳು ಅರ್ಜಿಗಳ ವಿಲೇವಾರಿಗೆ ನೀಡಿದ ಗುರಿಯನ್ನು ಯಾವ ಅಧಿಕಾರಿಗಳು ತಲುಪಿರುವುದಿಲ್ಲ. ಆದ್ದರಿಂದ ಈ ಅರ್ಜಿಗಳ ವಿಲೇವಾರಿಗೆ ಕ್ರಮ ವಹಿಸಲು ತಿಳಿಸಿ ಕೆಳಕಂಡಂತೆ ಗುರಿ ನಿಗದಿಪಡಿಸಲಾಯಿತು.

| ಕ್ರ.ಸಂ. | ತಾಲ್ಲೂಕು | ನಗದಿಪಡಿಸಿದ ಗುರಿ | |
|---|---|---|---|
| | | 7 ಅರ್ಜಿ | 7ಎ ಅರ್ಜಿ |
| 1. | ಶಿವಮೊಗ್ಗ | 4 | 50 |
| 2. | ಭದ್ರಾವತಿ | 2 | – |
| 3. | ತೀರ್ಥಹಳ್ಳಿ | 3 | – |
| 4. | ಹೊಸನಗರ | 2 | 145 |
| 5. | ಸಾಗರ | 4 | 50 |
| 6. | ಸೊರಬ | 2 | 50 |
| 7. | ಶಿಕಾರಿಪುರ | 2 | 50 |

ಬಾಕಿ ಇರುವ ಅರ್ಜಿಗಳ ಬಗ್ಗೆ ಎಲ್ಲಾ ತಹಶೀಲ್ದಾರ್‌ರುಗಳು ಮುಂದಿನ ತಿಂಗಳು ಸಭೆಗೆ ಹಾಜರಾಗುವಾಗ ಬಾಕಿ ಅರ್ಜಿಗಳ ಬಗ್ಗೆ ಕೆಳಕಂಡ ಅಂಶಗಳ ಬಗ್ಗೆ ಮಾಹಿತಿಯನ್ನು ತಪ್ಪದೇ ತರಲು ತಿಳಿಸಲಾಯ್ತು.

ಅ) ಸಾಕ್ಷಿಗಳ ಹಂತ

ಆ) ವಿಚಾರಣಾ ಹಂತ

ಇ) ಆದೇಶಕ್ಕೆ ಸಿದ್ದವಾಗಿರುವ ಪ್ರಕರಣಗಳು

**i. <u>ಭೂ ಸುಧಾರಣೆ ಕಾಯ್ದೆ ರೀತ್ಯಾ ಭೂ ಮಾಲೀಕರಿಗೆ ಪರಿಹಾರ ಪಾವತಿಸುವ ವಿಚಾರ</u> :-**

ಪ್ರಗತಿ ತ:ಖ್ತೆ ಪರಿಶೀಲಿಸಲಾಯಿತು. ಎಲ್ಲಾ ತಾಲ್ಲೂಕಿನಲ್ಲಿ ಪರಿಹಾರ ಪಾವತಿಸಲು ಬಾಕಿ ಇರುವುದು ಪರಿಶೀಲಿಸಲಾಯಿತು. ಎಷ್ಟು ಜನ ಭೂ ಮಾಲೀಕರಿಗೆ ಪರಿಹಾರ ಪಾವ್ತಿಸಬೇಕಾಗಿರುತ್ತೆ. ಪರಿಹಾರ ಪಾವತಿಸಲು ಬಾಕಿ ಇರಲು ಕಾರಣವೇನು? ಎಷ್ಟು ಪ್ರಕರಣಗಳಿಗೆ ಪರಿಹಾರ ಪಾವತಿಸಬೇಕು? ಈಗಾಗಲೇ ಎಷ್ಟು ಪ್ರಕರಣಗಳಿಗೆ ಪರಿಹಾರ ಪಾವ್ತಿಸಲಾಗಿದೆ. ಎಷ್ಟು ಪ್ರಕರಣಗಳಿಗೆ ನೋಟೀಸ್ ನೀಡಲಾಗಿದೆ? ಎಷ್ಟು ಪ್ರಕರಣಗಳಲ್ಲಿ ಪರಿಹಾರ ವಿಚಾರವಾಗಿ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ದಾಖಲು ಮಾಡಿರುತ್ತಾರೆ. ಈ ವಿವರಗಳನ್ನು ಮುಂದಿನ ಸಭೆಗೆ ಬರುವಾಗ ತಪ್ಪದೇ ಹಾಜರುಪಡಿಸಲು ಸೂಚಿಸಲಾಯಿತು. ಈ ವಿಷಯದ ಬಗ್ಗೆ ಜಿಲ್ಲಾಧಿಕಾರಿಗಳ ಕಛೇರಿ ಸಹಾಯಕರು ಎಲ್ಲಾ ತಾಲ್ಲೂಕಿನ ಭೂ ಸುಧಾರಣಾ ವಿಷಯ ನಿರ್ವಾಹಕರನ್ನು ಶಿರಸ್ತೇದಾರರನ್ನು ಕರೆಸಿ ಸದರಿ ವಿಷಯದ ಬಗ್ಗೆ ಒಂದು ವಾರದೊಳಗೆ ಸಮನ್ವಯ ಮಾಡಿಕೊಳ್ಳಲು ಸೂಚಿಸಲಾಯ್ತು.

ii. **<u>ಭೂ ಸುಧಾರಣಾ ಕಾಯಿದೆಯಡಿ ತೀರ್ಮಾನದ ಪ್ರಕರಣಗಳಿಗೆ ಹಕ್ಕುಪತ್ರ (ಫಾರಂ 10) ನೀಡುವ ವಿಚಾರ</u> :–**

ಪ್ರಗತಿ ತ:ಖ್ತೆ ಪರಿಶೀಲಿಸಲಾಯಿತು. ಹಕ್ಕುಪತ್ರ ನೀಡಲು ಬಾಕಿ ಪ್ರಕರಣಗಳ ಬಗ್ಗೆ ತಹಶೀಲ್ದಾರ್‌ಗಳು ನ್ಯಾಯಾಲಯದಲ್ಲಿರುವುದಾಗಿ/ಸರ್ವೆ ಕೆಲಸ ಆಗಬೇಕಾಗಿ ತಿಳಿಸಿದರು. ಆದ್ದರಿಂದ ಈ ಬಗ್ಗೆ ನ್ಯಾಯಾಲಯದಲ್ಲಿರುವ ಪ್ರಕರಣಗಳು ಹಾಗೂ ಸರ್ವೆ ಆಗಬೇಕಾಗಿರುವ ಪ್ರಕರಣಗಳ ಬಗ್ಗೆ ಪ್ರತ್ಯೇಕ ವರದಿಯನ್ನು 1 ವಾರದೊಳಗಾಗಿ ಈ ಕಛೇರಿಗೆ ಮುದ್ದಾಂ ಸಲ್ಲಿಸಲು ಹಾಗೂ ಮುಂದಿನ ಸಭೆಗೆ ಈ ವಿವರ ತರಲು ಸೂಚಿಸಲಾಯ್ತು.

**iii. <u>79ಎ ಮತ್ತು 79ಬಿ ಪ್ರಕರಣಗಳ ಪ್ರಗತಿ</u> :-**

ಭೂ ಸುಧಾರಣಾ ಕಾಯ್ದೆ 79ಎ ಮತ್ತು 79ಬಿ ಪ್ರಕರಣಗಳ ಬಗ್ಗೆ ಪ್ರಗತಿ ಪರಿಶೀಲಿಸಲಾಯಿತು. ಯಾವ ತಹಶೀಲ್ದಾರ್‌ಗಳು ಡಿಸೆಂಬರ್ 2009ರಲ್ಲಿ 79ಎ ಪ್ರಕರಣ ಗುರ್ತಿಸಿರುವುದಿಲ್ಲ. 79ಬಿ ಅಡಿಯಲ್ಲಿ ಶಿವಮೊಗ್ಗ ಮತ್ತು ಭದ್ರಾವತಿ ಇವರು ತಲಾ 1 ಪ್ರಕರಣಗಳನ್ನು ಗುರ್ತಿಸಿರುತ್ತಾರೆ.

ಆದ್ದರಿಂದ ಇನ್ನು ಮುಂದೆ ತಹಶೀಲ್ದಾರ್‌ರುಗಳು 79ಎ ಮತ್ತು ಬಿ ಪ್ರಕರಣಗಳ ಉಲ್ಲಂಘನೆ ಬಗ್ಗೆ ಪತ್ತೆ ಹಚ್ಚಿ ಸರ್ಕಾರಕ್ಕೆ ಆ ಜಮೀನನ್ನು ವಶಕ್ಕೆ ಪಡೆಯಲು ಸೂಚಿಸಲಾಯ್ತು. ಸರ್ಕಾರದ ವಶಕ್ಕೆ ಪಡೆಯಲಾದ ಜಮೀನಿನ ವಿವರಗಳನ್ನು ಈ ಕಛೇರಿಗೆ ವರದಿ ಮಾಡಲು ಸೂಚಿಸಲಾಯಿತು. ಈ ಜಮೀನುಗಳು ಸರ್ಕಾರದ ಉದ್ದೇಶಗಳಿಗೆ ಮಂಜೂರಾತಿಗೆ ಅವಶ್ಯವಿರುವುದರಿಂದ ಮುಂದಿನ ಸಭೆಗೆ ವಿವರಗಳೊಂದಿಗೆ ಹಾಜರಾಗಲು ಸೂಚಿಸಲಾಯ್ತು.

**11. <u>ಋತುಮಾನ ಪರಿಸ್ಥಿತಿ</u> :-**

2009 ಡಿಸೆಂಬರ್ ಮಾಹೆಯಲ್ಲಿ ಸಾಗರ, ಸೊರಬ ಮತ್ತು ಹೊಸನಗರ ಬಿಟ್ಟು ಉಳಿದ ಎಲ್ಲಾ ತಾಲ್ಲೂಕುಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ಬಿದ್ದಿರುವುದನ್ನು ಗಮನಿಸಲಾಯಿತು. ಸಧ್ಯದ ಪರಿಸ್ಥಿತಿಯಲ್ಲಿ ಜಾನುವಾರುಗಳಿಗೆ ಮೇವು ಕೊರತೆ ಇರುವುದಿಲ್ಲ. ಕುಡಿಯುವ ನೀರಿನ ಕೊರತೆ ಇರುವುದಿಲ್ಲವೆಂಬ ಅಂಶವನ್ನು ಗಮನಿಸಲಾಯಿತು. ಆದರೂ ಸಹ ಈ ಕುರಿತು ಸಮಸ್ಯೆ ಉದ್ಭವಿಸದ ಹಾಗೆ ಮುನ್ನೆಚ್ಚರಿಕೆ ಕ್ರಮವಹಿಸಲು ತಹಶೀಲ್ದಾರ್‌ರುಗಳಿಗೆ ಮತ್ತು ಇತರೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಯಿತು.

**i. ಬೆಳೆ ಮತ್ತು ಮನೆಗಳ ಪರಿಹಾರ:-**

ಪ್ರಗತಿ ವರದಿಯನ್ನು ಪರಿಶೀಲಿಸಲಾಯಿತು. ಮನೆಗಳ ಪರಿಹಾರ ಯಾವುದೂ ಬಾಕಿ ಇರುವುದಿಲ್ಲವೆಂದೂ, ಭತ್ತಕ್ಕೆ ಕಂದು ಜಿಗಿ ಹುಳು ರೋಗ ಬಾದೆಯಿಂದ ಈ ತಿಂಗಳ ಅಂತ್ಯದೊಳಗಾಗಿ ಎಲ್ಲಾ ಸಂತ್ರಸ್ಥರಿಗೆ ಪೂರ್ಣ ಪ್ರಮಾಣದಲ್ಲಿ ನೀಡಿ, ಮುಗಿಸುವುದಾಗಿ, ತಹಶೀಲ್ದಾರ್‌ರುಗಳು ಸಭೆಗೆ ಮಾಹಿತಿ ನೀಡಿದರು.

**ii. <u>ಬಳಕೆ ಪ್ರಮಾಣಪತ್ರ</u> :-**

2008-09ನೇ ಸಾಲಿಗೆ ನೀಡಿದ ಹಣಕ್ಕೆ ತಹಶೀಲ್ದಾರ್‌ರುಗಳು ಇನ್ನು ಬಳಕೆ ಪ್ರಮಾಣಪತ್ರ ನೀಡದಿರುವುದನ್ನು ಗಮನಿಸಲಾಯಿತು. ಎಲ್ಲಾ ತಹಶೀಲ್ದಾರ್‌ರುಗಳು ಬಿಡುಗಡೆ ಮಾಡಿದ ಹಣಕ್ಕೆ ಲೆಕ್ಕ ತಾಳೆ ಮಾಡಿಕೊಂಡು 31-1-2010ರೊಳಗಾಗಿ 2008-09ನೇ ಸಾಲಿನ ಹಣ ಬಳಕೆ ಪ್ರಮಾಣಪತ್ರ ಜಿಲ್ಲಾಧಿಕಾರಿಗಳ ಕಛೇರಿಗೆ ಸಲ್ಲಿಸಲು ಸೂಚಿಸಲಾಯಿತು. ಹಾಗೆಯೇ 2009-10ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣ ಸಹ ಲೆಕ್ಕ ತಾಳೆ ಮಾಡಿಕೊಂಡು ಹಣ ಬಳಕೆ ಪ್ರಮಾಪತ್ರ ಸಲ್ಲಿಸಲು ಎಲ್ಲಾ ತಹಶೀಲ್ದಾರ್‌ಗಳಿಗೆ ಸೂಚಿಸಲಾಯಿತು. (ವರ್ಷವಾರು ಪ್ರತ್ಯೇಕವಾಗಿ)

**12. <u>ಸರ್ವೆ ಶಾಖೆಗೆ ಸಂಬಂಧಿಸಿದ ವಿಚಾರಣೆಗಳು</u> :-**

a. ದಿನಾಂಕ 29-12-2009 ರಿಂದ ಪರವಾನಗಿ ಭೂಪಕರು ಮುಷ್ಕರ ನಡೆಸುತ್ತಿದ್ದು ಇದರಿಂದ ಸಾರ್ವಜನಿಕರಿಗೆ 11(2) ನಕ್ಷೆ ವಿತರಣೆಯಲ್ಲಿ ತೊಂದರೆಯಾಗುತ್ತಿರುವುದರಿಂದ ಎಲ್ಲಾ ಸರ್ಕಾರಿ ಭೂಮಾಪಕರುಗಳ ಲಾಗಿನ್ ತೆರೆದು ಅವರುಗಳಿಗೆ 11(ಇ) ನಕ್ಷೆ ಕೋರಿ ಬಂದಂತಹ ಅರ್ಜಿಗಳನ್ನು ಸರ್ಕಾರಿ ಭೂಮಾಪಕರುಗಳಿಗೆ ವಿತರಿಸಲು ಎಲ್ಲಾ ತಹಶೀಲ್ದಾರ್‌ರಿಗೆ ಸೂಚಿಸಲಾಯಿತು.

b. ದಿನಾಂಕ 18-1-2010ರ ಅಂತ್ಯಕ್ಕೆ ಸಾರ್ವಜನಿಕರಿಂದ 11(2)ರಲ್ಲಿ ಕೋರಿ ಬಂದಿರುವ ಅರ್ಜಿಗಳ ಪೈಕಿ ಆರ್‌ಟಿಸಿ ಒಟ್ಟುಗೂಡಿಸುವಿಕೆ/ಆರ್‌ಟಿಸಿ ತಿದ್ದುಪಡಿಗೆ ತಹಶೀಲ್ದಾರ್ ಲಾಗಿನ್‌ನಲ್ಲಿ ಬಹಳಷ್ಟು ಅರ್ಜಿಗಳು ಬಾಕಿ ಇದ್ದು ಇವುಗಳ ಬಾಬ್ತು ಶೀಘ್ರ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಬಾಕಿ ವಿವರ ಕೆಳಕಂಡಂತಿರುತ್ತದೆ.

| ಕ್ರ.ಸಂ. | ತಾಲ್ಲೂಕು | ಬಾಕಿ ಅರ್ಜಿ/ ಪ್ರಕರಣಗಳು |
|---|---|---|
| 1. | ಶಿವಮೊಗ್ಗ | 130 |
| 2. | ಭದ್ರಾವತಿ | 49 |
| 3. | ತೀರ್ಥಹಳ್ಳಿ | 12 |
| 4. | ಹೊಸನಗರ | 46 |
| 5. | ಸಾಗರ | 65 |
| 6. | ಸೊರಬ | 60 |
| 7. | ಶಿಕಾರಿಪುರ | 36 |

c. ದಿನಾಂಕ 19-8-2008ರ ಅಂತ್ಯಕ್ಕೆ ಬಾಕಿ ಇರುವ ಬ್ಯಾಕ್‌ಲಾಗ್ ಪೈಕಿ ಪ್ರಕರಣಗಳನ್ನು ಪರವಾನಗಿ ಭೂಪಕರಿಗೆ ವಿತರಿಸಿ ವಿಲೇಪಡಿಸಲು ಎಲ್ಲಾ ತಹಶೀಲ್ದಾರ್‌ರಿಗೆ ಸೂಚಿಸಲಾಯಿತು.

d. ಜಲಸಂವರ್ಧನೆ ಯೋಜನೆಯಲ್ಲಿ ಬರುವ ಕೆರೆಗಳ ಅಳತೆ ಕೆಲಸವನ್ನು ಶೀಘ್ರ ಪರವಾನಗಿ ಭೂಮಾಪಕರಿಂದ ನಿರ್ವಹಿಸಲು ಎಲ್ಲಾ ತಹಶೀಲ್ದಾರ್‌ರಿಗೆ ಸೂಚಿಸಲಾಯಿತು.

**13. ಕಡತ ವಿಲೇವಾರಿ ಪ್ರಗತಿ :-**

ಡಿಸೆಂಬರ್ 2009ರ ಪ್ರಕರಣಗಳ ವಿಲೇವಾರಿ ಪ್ರಗತಿ ಪರಿಶೀಲಿಸಲಾಯಿತು. ಎಲ್ಲಾ ಕಛೇರಿಗಳ ವಿಲೇವಾರಿ ಪ್ರಗತಿ ತೃಪ್ತಿದಾಯಕವಾಗಿರುವುದಿಲ್ಲ. ಆದ್ದರಿಂದ ಎಲ್ಲಾ ಅಧಿಕಾರಿಗಳು ತಮ್ಮ ಕಛೇರಿಯ ಪ್ರಕರಣಗಳ ವಿಲೇವಾರಿ ಬಗ್ಗೆ ಗಮನಹರಿಸಿ 3 ತಿಂಗಳ ನಂತರ ಪ್ರಕರಣಗಳು ಬಾಕಿ ಉಳಿಯದಂತೆ ನೋಡಿಕೊಳ್ಳಲು ತಿಳಿಸಲಾಯಿತು.

**14. ಆರಾಧನಾ ಯೋಜನೆ ಪ್ರಗತಿ :-**

ಆರಾಧನಾ ಯೋಜನೆ ಪ್ರಗತಿ ವಿವರ ಪರಿಶೀಲಿಸಲಾಯಿತು. ಅದರಲ್ಲಿ ಹಳೇ ಬಳಕೆ ಪ್ರಮಾಣಪತ್ರ ಸಲ್ಲಿಸುವ ಬಹಳಷ್ಟು ಪ್ರಕರಣಗಳು ವಿವಿಧ ತಹಶೀಲ್ದಾರ್‌ರಲ್ಲಿ ಬಾಕಿ ಇರುತ್ತವೆ. ಆದ್ದರಿಂದ ಈ ಬಗ್ಗೆ ತಹಶೀಲ್ದಾರ್‌ರು ಬಹಳಷ್ಟು ಕಾಮಗಾರಿಗಳ ಬಾಕಿ ಇರುವುದರಿಂದ ಯು.ಸಿ. ಸಲ್ಲಿಸಲು ಸಾಧ್ಯವಾಗುತ್ತಿಲ್ಲವಾಗಿ ತಿಳಿಸಿದರು. ಆದ್ದರಿಂದ ಸಂಬಂಧಿಸಿದವರಿಗೆ ತಿಳುವಳಿಕೆ ನೀಡಿ ಕಾಮಗಾರಿ ಬೇಗ ಮುಗಿಸುವಂತೆ ಕ್ರಮ ಕೈಗೊಂಡು

ಯು.ಸಿ. ಸಲ್ಲಿಸಲು ತಹಶೀಲ್ದಾರ್‌ರಿಗೆ ತಿಳಿಸಲಾಯಿತು. ಈ ತಿಂಗಳಲ್ಲಿ ಯು.ಸಿ. ಸಲ್ಲಿಸಲು ಕೆಳಗಿನಂತೆ ಗುರಿ ನಿಗದಿಪಡಿಸಲಾಯಿತು.

| ಕ್ರ.ಸಂ. | ತಾಲ್ಲೂಕು | ನಿಗದಿಪಡಿಸಿದ ಗುರಿ |
|---|---|---|
| 1. | ಶಿವಮೊಗ್ಗ | – |
| 2. | ಭದ್ರಾವತಿ | 13 |
| 3. | ತೀರ್ಥಹಳ್ಳಿ | 10 |
| 4. | ಹೊಸನಗರ | 8 |
| 5. | ಸಾಗರ | 5 |
| 6. | ಸೊರಬ | 4 |
| 7. | ಶಿಕಾರಿಪುರ | 3 |

15. **ರಾಷ್ಟ್ರೀಯ ಕುಟುಂಬ ಪರಿಹಾರ ಯೋಜನೆ ಪ್ರಗತಿ** :-

ಪ್ರಗತಿ ತ:ಖ್ತೆ ಪರಿಶೀಲಿಸಲಾಯಿತು. ಬಹಳಷ್ಟು ಅರ್ಜಿಗಳು ಬಾಕಿ ಇದ್ದು ಅವುಗಳ ವಿಲೇವಾರಿಗೆ ಕ್ರಮಕೈಗೊಳ್ಳಲು ಹಾಗೂ ಮಂಜೂರಾತಿಯಾದ ಪ್ರಕರಣಗಳಿಗೆ ರಿಜಿಸ್ಟರ್ ನಿರ್ವಹಿಸಿ, ಅದರಂತೆ ಹಣವನ್ನು ಕ್ರಾಸ್ಡ್ ಚೆಕ್ ಮೂಲಕ ನೀಡಲು ಕ್ರಮ ವಹಿಸಲು ತಹಶೀಲ್ದಾರ್‌ರಿಗೆ ತಿಳಿಸಲಾಯಿತು.

16. **ಅಂತ್ಯ ಸಂಸ್ಕಾರ ಯೋಜನೆ** :-

ಈ ಯೋಜನೆಯ ಅಡಿ ಬಂದ ಅರ್ಜಿಗಳ ವಿಲೇವಾರಿ ಬಗ್ಗೆ ಬಹಳಷ್ಟು ಅರ್ಜಿಗಳು ಬಾಕಿ ಇದ್ದು 1 ತಿಂಗಳ ಒಳಗಿನ ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡಲು ಹಾಗೂ ಮಂಜೂರಾದ ಪ್ರಕರಣಗಳಿಗೆ ಕೂಡಲೇ ಹಣ ಪಾವತಿಸಲು ಈ ಬಗ್ಗೆ ಹಣದ ಅವಶ್ಯಕತೆ ಇದ್ದಲ್ಲಿ ಬೇಡಿಕೆ ಸಲ್ಲಿಸಲು ತಹಶೀಲ್ದಾರ್‌ರಿಗೆ ತಿಳಿಸಲಾಯಿತು.

17. **ಸಂಧ್ಯಾ ಸುರಕ್ಷಾ ಯೋಜನೆ ಔಂಕ/ಕಉಊಕ/ಆಘಕ ಪ್ರಕರಣಗಳ ವಿಲೇವಾರಿ** :-

ಈ ಯೋಜನೆಯ ಅರ್ಜಿಗಳ ವಿಲೇವಾರಿ ತ:ಖ್ತೆ ಪರಿಶೀಲಿಸಲಾಗಿ ಎಲ್ಲಾ ತಹಶೀಲ್ದಾರ್‌ರಲ್ಲಿ ಡಿಸೆಂಬರ್ ತಿಂಗಳ ಅಂತ್ಯಕ್ಕೆ ಬಹಳಷ್ಟು ಪ್ರಕರಣಗಳು ಬಾಕಿ ಇದ್ದು ಅವುಗಳನ್ನು ಡ್ರೈವ್ ಮೂಲಕ ವಿಲೇವಾರಿ ಮಾಡಲು ತಿಳಿಸಲಾಯಿತು.

ಅಲ್ಲದೇ ಮೇಲ್ಕಂಡ ಎಲ್ಲಾ ಯೋಜನೆ ಅಡಿ ಮಂಜೂರಾದ ಪ್ರಕರಣಗಳ ಬಗ್ಗೆ ಎಲ್ಲಾ ಗ್ರಾಮ ಲೆಕ್ಕಿಗರು ಮಂಜೂರಾತಿ ವಹಿ ಇಟ್ಟಿರುವ ಬಗ್ಗೆ ದೃಢೀಕರಿಸಿಕೊಂಡು ಅದನ್ನು ನಿರ್ವಹಣೆ ಮಾಡಿಸಿ ಜಿಲ್ಲಾಧಿಕಾರಿಗಳ ಕಛೇರಿಗೆ ವರದಿಸಲು ತಹಶೀಲ್ದಾರ್‌ರಿಗೆ ಸೂಚಿಸಲಾಯಿತು.

18. **ರೆಕಾರ್ಡು ಕೋಣೆಯಲ್ಲಿನ ಕಡತಗಳನ್ನು ವಿಂಗಡಿಸಿ ಇಂಡೆಕ್ಸ್ ತಯಾರಿಸುವ ಬಗ್ಗೆ** :-

ರೆಕಾರ್ಡು ಕೋಣೆಯ ಎಲ್ಲಾ ಕಡತಗಳನ್ನು ವಿಂಗಡಿಸುವ ಕಾರ್ಯ ತೀರ್ಥಹಳ್ಳಿ ಹೊರತುಪಡಿಸಿ ಉಳಿದ ತಾಲ್ಲೂಕುಗಳಲ್ಲಿ ಮುಕ್ತಾಯವಾಗಿರುವುದಾಗಿ ತಹಶೀಲ್ದಾರ್‌ರು

ತಿಳಿಸಿದರು. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ವಿಂಗಡಣೆ ಕಾರ್ಯ ನಡೆಯುತ್ತಿದ್ದು ಶೀಘ್ರದಲ್ಲೇ ಮುಗಿಸುವುದಾಗಿ ತಹಶೀಲ್ದಾರ್‌ರು ತಿಳಿಸಿದರು.

ಕಡತಗಳನ್ನು ವಿಂಗಡಿಸಿದ ನಂತರ ಇಂಡೆಕ್ಸ್ ಮಾಡುವ ವಿಚಾರದ ಪ್ರಗತಿಯನ್ನು ಜಿಲ್ಲಾಧಿಕಾರಿಗಳು ತಾಲ್ಲೂಕುವಾರು ಮಾಹಿತಿಯನ್ನು ತಹಶೀಲ್ದಾರ್‌ರಿಂದ ಪಡೆದರು. ಆದರೆ ಈ ಕಾರ್ಯ ಸಮರ್ಪವಾಗಿ ನಡೆಯುತ್ತಿಲ್ಲವಾಗಿ ಜಿಲ್ಲಾಧಿಕಾರಿಗಳು ಅಸಮಧಾನ ವ್ಯಕ್ತಪಡಿಸಿದರು. ಪ್ರತಿ ದಿವಸ 1000 ರಂತೆ ಗುರಿ ಇಟ್ಟುಕೊಂಡು ಇಂಡೆಕ್ಸ್ ಕಾರ್ಯನಿರ್ವಹಿಸಲು ಅತೀ ಶೀಘ್ರದಲ್ಲೇ ಈ ಕಾರ್ಯನಿರ್ವಹಿಸಲು ಹಾಗೂ ಅವಧಿ ಮುಗಿದ ಕಡತಗಳ ಬಗ್ಗೆ ರಿಜಿಸ್ಟರ್‌ನಲ್ಲಿ ನಮೂದಿಸಿ ನಿಯಮಾನುಸಾರ ವಿಲೇವಾರಿ ಮಾಡಲು ಸೂಚಿಸಲಾಯಿತು. ಈ ಬಗ್ಗೆ ಅಗತ್ಯವಾದ ರ್‍ಯಾಕ್ಸ್, ಬಟ್ಟೆ ಇತ್ಯಾದಿಗಳ ಬಗ್ಗೆ ಬೇಡಿಕೆ ಸಲ್ಲಿಸಲು ತಿಳಿಸಲಾಯಿತು.

**19. <u>ಜನಗಣತಿ</u> :-**

ಜನಗಣತಿ 2011 ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದ್ದು, ಈ ಬಗ್ಗೆ ಬಂದ ಸುತ್ತೋಲೆಗಳನ್ನು ಇ-ಮೇಲ್‌ನಿಂದ ಪಡೆದು ಪರಿಶೀಲಿಸಲು ಸೂಚಿಸಲಾಯ್ತು. ಜನಗಣತಿ ಕಾರ್ಯವು ನಿಗದಿತ ದಿನಾಂಕದೊಳಗೆ ಆಯಾ ಹಂತದ ಕಾರ್ಯ ಮುಗಿಸಬೇಕಾದ್ದರಿಂದ ಈ ಬಗ್ಗೆ ಎನ್ಯುಮರೇಟರ್, ಸೂಪರ್‌ವೈಸರ್, ಮಾಸ್ಟರ್ ಟ್ರೈನರ್‌ಗಳ ನೇಮಕವಾಗಬೇಕಾಗಿದೆ. ಆದ್ದರಿಂದ ಈ ಬಗ್ಗೆ ತಹಶೀಲ್ದಾರ್‌ಗಳು ನೇಮಿಸಬೇಕಾದ ಎನ್ಯುಮರೇಟರ್, ಸೂಪರ್‌ವೈಸರ್ ಮಾಸ್ಟರ್ ಟ್ರೈನರ್‌ಗಳ ಪಟ್ಟಿಯನ್ನು ಸಿದ್ದಪಡಿಸಿ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಯಿತು.

**20. <u>ಸರ್ಕಾರಿ ಜಮೀನು ಒತ್ತುವರಿ ಖುಲ್ಲಾಪಡಿಸುವ ಬಗ್ಗೆ</u> :-**

ಒತ್ತುವರಿ ಮಾಡಿದ ಸರ್ಕಾರಿ ಜಮೀನುಗಳ ಮಾಹಿತಿಯನ್ನು ತಯಾರಿಸಿ ಸಲ್ಲಿಸಲು ತಿಳಿಸಲಾಗಿದ್ದರೂ ಈವರೆಗೂ ಯಾವ ತಹಶೀಲ್ದಾರ್‌ಗಳೂ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಈ ಮಾಹಿತಿಯನ್ನು ಹಾಗೂ ಬಗರ್‌ಹುಕ್ಕುಂ ಸಕ್ರಮೀಕರಣ ಸಮಿತಿಯಲ್ಲಿ ವಜಾ ಆಗಿರುವ ನಮೂನೆ 50 – 53 ಅರ್ಜಿಗಳ ಗ್ರಾಮವಾರು, ಸರ್ವೆ ನಂಬರ್‌ವಾರು, ವಿವರಗಳು ಹಾಗೂ ಯಾವ ಕಾರಣದಿಂದ ನಮೂನೆ 50 – 53 ವಜಾ ಆಗಿದೆ ಎಂಬ ಬಗ್ಗೆ ಪ್ರತಿ ಅರ್ಜಿದಾರರುಗಳವಾರು ಪಟ್ಟಿ ತಯಾರಿಸಿಟ್ಟುಕೊಳ್ಳಲು ತಹಶೀಲ್ದಾರ್‌ಗಳಿಗೆ ತಿಳಿಸಲಾಯ್ತು.
ಈ ರೀತಿ ಸರ್ಕಾರಿ ಜಮೀನು ಅನಧಿಕೃತವಾಗಿ ಒತ್ತುವರಿ ಮಾಡಿದ ಕನಿಷ್ಠ 10 ಪ್ರಕರಣಗಳಿಗೆ ಪ್ರತಿ ತಹಶೀಲ್ದಾರ್‌ರವರು ಸೆಕ್ಷನ್ 192ಎ ಪ್ರಕಾರ ಕಡ್ಡಾಯವಾಗಿ ಪ್ರಕರಣ ದಾಖಲು ಮಾಡಲು ಹಾಗೂ ಮುಂದಿನ ಸಭೆಗೆ ಬರುವಾಗ ಈ ಮಾಹಿತಿ ತರಲು ತಿಳಿಸಲಾಯಿತು.

**21. <u>ಬೆಳೆ ಇಂಡೀಕರಣ ಕಾರ್ಯಪ್ರಗತಿ</u> :-**

2009-10ರ ಮುಂಗಾರು ಸಾಲಿನ ಬೆಳೆ ಇಂಡೀಕರಣ ಕಾರ್ಯದ ಬಗ್ಗೆ ಡಾಟಾ ಎಂಟ್ರಿ ಈವರೆಗೂ ಎಲ್ಲಾ ತಹಶೀಲ್ದಾರ್‌ರುಗಳು ಪೂರ್ಣಗೊಳಿಸದಿರುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಲಾಯಿತು. ಸರ್ಕಾರದ ನಿರ್ದೇಶನ ರೀತ್ಯಾ ವೇಳಾಪಟ್ಟಿವಾರು ಆಯಾ ದಿನಾಂಕದೊಳಗೆ ನಗದಿಪಡಿಸಿದ ಕಾರ್ಯವನ್ನು ಕಡ್ಡಾಯವಾಗಿ ಪೂರ್ಣಗೊಳಿಸಲು ಎಲ್ಲಾ ತಹಶೀಲ್ದಾರ್‌ಗಳೀಗೆ ತಿಳಿಸಲಾಯ್ತು.

22. **ವಾರ್ಷಿಕ ತಪಾಸಣೆ** :–

ಈಗಾಗಲೇ ಜಿಲ್ಲಾಧಿಕಾರಿಗಳು ನೀಡಿರುವ ನಿರ್ದೇಶನದಂತೆ ಅಧೀನ ಕಛೇರಿಗಳ/ನೌಕರರ ವಾರ್ಷಿಕ ತಪಾಸಣೆಯನ್ನು ನಿಗದಿತ ಅವಧಿಯಲ್ಲಿ ನೆಡೆಸದಿರುವ ಬಗ್ಗೆ ಆಕ್ಷೇಪಿಸಲಾಯಿತು. ಆದ್ದರಿಂದ ನಿಗಡಿಪಡಿಸಿದಂತೆ ತಪಾಸಣೆ ನೆಡೆಸಿ ಪಾಲನಾ ವರದಿ ಸಲ್ಲಿಸಲು ತಿಳಿಸಲಾಯಿತು.

23. **ಅನುಪಾಲನಾ ವರದಿ ಸಲ್ಲಿಸುವ ಬಗ್ಗೆ** :–

ಪ್ರತಿ ತಿಂಗಳು ನೆಡೆಸುವ ಕಂದಾಯಾಧಿಕಾರಿಗಳ ಸಭೆಯಲ್ಲಿ ತಿಳಿಸಿದ ಅಂಶಗಳ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ತಪ್ಪದೇ ಅನುಪಾಲನಾ ವರದಿ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/–
ಜಿಲ್ಲಾಧಿಕಾರಿ,
ಶಿವಮೊಗ್ಗ ಜಿಲ್ಲೆ.

**ನಂ. ಕಂ.ಅ.ಸಭೆ.1/2010**

ಪ್ರತಿ ಸಂಬಂಧಪಟ್ಟವರಿಗೆ ಅಗತ್ಯ ಕ್ರಮಕ್ಕಾಗಿ ಹಾಗೂ ಈ ಬಗ್ಗೆ ಪಾಲನಾ ವರದಿ ಸಲ್ಲಿಸಲು ಕೋರಿದೆ.

ಅಪರ ಜಿಲ್ಲಾಧಿಕಾರಿ,
ಶಿವಮೊಗ್ಗ ಜಿಲ್ಲೆ.